ಇದ್ದರು. ತಮಗೆ ಅನುಕೂಲವಾದ ಕಾನೂನು ಕಾಯ್ದೆಗಳನ್ನು ಜಾರಿಗೊಳಿಸಿ ಭಾರತೀಯರನ್ನು ಕಿರುಕುಳಕ್ಕೆ ಈಡು ಮಾಡುವುದು ಬ್ರಿಟಿಷರಿಗೆ ಆಟವಾಗಿತ್ತು. ದಕ್ಷಿಣ ಭಾರತದಲ್ಲಿ ಬ್ರಿಟಿಷ್ ಅಧಿಪತ್ಯ ಮದ್ರಾಸ್‌ನಲ್ಲಿ ನೆಲೆ ನಿಂತಿತ್ತು. ಅಲ್ಲಿಯ ಸೆಂಟ್ ಜಾರ್ಜ್ ಕೋಟೆಯೊಳಗೆ ಮದ್ರಾಸ್ ಸೇನೆ ಇತ್ತು.

ಜಾನ್ ಕ್ರೆಡಾಕ್ ಆಗ ಮದ್ರಾಸ್ ಸೈನ್ಯದ ದಂಡನಾಯಕ. ಈಸ್ಟ್ ಇಂಡಿಯಾ ಕಂಪನಿ ಸೇನೆಯಲ್ಲಿ ಭಾರತೀಯರೂ ಸೇವೆ ಸಲ್ಲಿಸುತ್ತಿದ್ದರು. ಭಾರತೀಯ ಸೈನಿಕರ ಗಡ್ಡಮೀಸೆ ಕತ್ತರಿಸುವಂತೆ, ಸಾಂಪ್ರದಾಯಿಕ ಪೇಟಾ ಬದಲಿಗೆ ಹ್ಯಾಟ್ ಧರಿಸುವಂತೆ ಆದೇಶ ಹೊರಟಿತು. ಆ ಆದೇಶ ಧಾರ್ಮಿಕ ಭಾವನೆಗಳನ್ನು ಕೆಣಕುವಂತೆ ಮಾಡಿದೆಯೆಂದು ಸೈನಿಕರು ವೆಲ್ಲೂರು ಕೋಟೆಯ ಸೇನಾ ಮೇಲಧಿಕಾರಿಗಳಿಗೆ ದೂರು ಕೊಟ್ಟರು. ದೂರಿಗೆ ಪ್ರತಿಕ್ರಿಯೆ ಬಾರದಿದ್ದಾಗ ಒಂದಿಬ್ಬರು ಸೈನಿಕರು ಮದ್ರಾಸ್‌ಗೆ ಹೋಗಿ ಅಹವಾಲು ಕೊಟ್ಟರು. ಅವರಿಗೆ ಸಿಕ್ಕಿದ್ದು ಛಡಿ ಏಟು ಹಾಗೂ ಕೆಲಸದಿಂದ ಕಿತ್ತು ಹಾಕುವ ಬೆದರಿಕೆ.





ವೆಲ್ಲೂರು ಕೋಟೆಯ ಒಳಾಂಗಣ ನೋಟದ ಚಿತ್ರಗಳು

ಮೇಲಧಿಕಾರಿಗಳ ನಿರ್ಲಕ್ಷ್ಯದಿಂದ ವೆಲ್ಲೂರು ಕೋಟೆಯಲ್ಲಿದ್ದ ಭಾರತೀಯ ಸಿಪಾಯಿಗಳಲ್ಲಿ ಅಸಮಾಧಾನ ಇದ್ದೇ ಇತ್ತು. ಅವರು ಸೆಟೆದು ನಿಲ್ಲುವ ಸಮಯಕ್ಕಾಗಿ ಕಾಯುತ್ತಿದ್ದರು. ಬ್ರಿಟಿಷ್ ಅಧಿಕಾರಿಗಳಿಂದ ಆಗಾಗ ಆಗುತ್ತಿದ್ದ ಅಪಮಾನಗಳಿಂದ ಭಾರತೀಯ ಸಿಪಾಯಿಗಳು ರೋಸಿ ಹೋಗಿದ್ದರು. ಅವರಲ್ಲೆಲ್ಲ ಸಿಟ್ಟು, ಪ್ರತೀಕಾರ ಹೊಗೆಯಾಡುತ್ತಲೇ ಇತ್ತು.

1806ರ ಜುಲೈ 9ರಂದು ಟಿಪ್ಪುಸುಲ್ತಾನ್ ಪುತ್ರಿಯೊಬ್ಬಳ ಮದುವೆ ವೆಲ್ಲೂರಿನಲ್ಲಿ ನಡೆಯುವುದಿತ್ತು. ಭಾರತೀಯ ಸಿಪಾಯಿಗಳೂ ಮದುವೆಗೆಂದು ಸೇರಿದ್ದರು. ಕೋಟೆಯ ಒಳ ಭಾಗದಲ್ಲಿದ್ದವರು, ಹೊರವಲಯದಲ್ಲಿ ವಾಸಿಸುತ್ತಿದ್ದವರು ಒಟ್ಟಾಗಲು ಅವಕಾಶ ಇತ್ತು. ಅಂತಹ ಸಂದರ್ಭಕ್ಕಾಗಿ ಕಾಯುತ್ತಿದ್ದವರೆಲ್ಲರೂ ಒಟ್ಟಾಗಿ ಕೋಟೆಯೊಳಗೆ ನುಗ್ಗಿದವರೇ ಅಲ್ಲಿ ವಾಸಿಸುತ್ತಿದ್ದ ಬ್ರಿಟಿಷ್ ಸೈನಿಕರು, ಅಧಿಕಾರಿಗಳು ಹಾಗೂ ಅವರ ಕುಟುಂಬದವರನ್ನು ಕೊಂದು ಹಾಕಿದರು. ಇದು ನಡೆದಿದ್ದು ಜುಲೈ 10ರ ನಡುರಾತ್ರಿಯ ನಂತರ. ಗಾಢನಿದ್ರೆಯಲ್ಲಿದ್ದ 115ಕ್ಕೂ ಹೆಚ್ಚಿನವರು ಪ್ರಾಣ ಕಳೆದುಕೊಂಡಿದ್ದರು. ಅವರಲ್ಲಿ ಕೋಟೆಯ ನಿಯಂತ್ರಣಾಧಿಕಾರಿ ಕರ್ನಲ್ ಸೆಂಟ್ ಜಾನ್ ಫಾನ್‌ಕೋರ್ಟ್ ಕೂಡ ಸೇರಿದ್ದರು.

ದಂಗೆ ನಡೆಸಿದ್ದ ಸಿಪಾಯಿಗಳು ಇಡೀ ಕೋಟೆಯನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡು ಬಾಗಿಲು ಮುಚ್ಚುವುದರೊಳಗೆ, ಪ್ರಾಣ ಉಳಿಸಿಕೊಂಡಿದ್ದ ಕೆಲವು ಬ್ರಿಟಿಷ್ ಸೈನಿಕರು ಕೋಟೆಯಿಂದ ತಪ್ಪಿಸಿಕೊಂಡು ಅಲ್ಲಿಂದ 25 ಕಿ.ಮೀ. ದೂರದ ಆರ್ಕಾಟ್‌ನಲ್ಲಿ ತಂಗಿದ್ದ ಮದ್ರಾಸ್ ಸೈನ್ಯದ ಇನ್ನೊಂದು ತುಕಡಿಗೆ ಸುದ್ದಿ ಮುಟ್ಟಿಸಿದರು. ಆಗ ಆ ತುಕಡಿ ನೇತೃತ್ವ ವಹಿಸಿದ್ದ ಗೆಲ್ಲೆಸ್‌ಪೀ ಲಭ್ಯವಿದ್ದ 60 ಮಂದಿ ಸೈನಿಕರು, ವೈದ್ಯರ ತಂಡದೊಡನೆ ವೆಲ್ಲೂರಿಗೆ ಧಾವಿಸಿದರು. ಇದೆಲ್ಲವೂ ಕತ್ತಲಲ್ಲಿ ಕೆಲವೇ ಗಂಟೆಗಳಲ್ಲಿ ನಡೆದುಹೋಯಿತು.

ಗೆಲ್ಲೆಸ್‌ಪೀ ತಂಡ ಬಂದಿದ್ದೇ ವೆಲ್ಲೂರು ಕೋಟೆ ಬಾಗಿಲನ್ನು ಮುರಿದು ಒಳನುಗ್ಗಿದ್ದೇ ಅಲ್ಲಿಯೇ ಇದ್ದ ಭಾರತೀಯ ಸಿಪಾಯಿಗಳನ್ನು ಹೊಡೆದುರುಳಿಸಲು ಶುರುವಿಟ್ಟಿತು. ಬ್ಯಾರಕ್‌ಗಳಲ್ಲಿ ಇದ್ದವರನ್ನೂ ಬಿಡದೆ ಹೊರಗೆಳೆದು ಕೊಂದ ಬಿಳಿಯ ಸೈನಿಕರು, ತಮ್ಮ ಕೈಗೆ ಸಿಕ್ಕ ಸಿಪಾಯಿಗಳನ್ನು ಕೋಟೆಯ ಗೋಡೆಗೆ ನಿಲ್ಲಿಸಿ ಗುಂಡಿಕ್ಕಿ ಕೊಂದರು. ಅವರೇ ಕೊಟ್ಟ ಅಂಕಿಅಂಶಗಳ ಪ್ರಕಾರ ಕೋಟೆಯೊಳಗೆ ಪ್ರಾಣತೆತ್ತ ಸಿಪಾಯಿಗಳು 350ಕ್ಕೂ ಹೆಚ್ಚು. ಸೈನಿಕರ ಕಾರ್ಯಾಚರಣೆ ಬಳಿಕ ವೆಲ್ಲೂರು ಪೊಲೀಸರು ಕೋಟೆಯೊಳಗೆ ಅಳಿದುಳಿದ ಸಿಪಾಯಿಗಳಲ್ಲಿ ಬಹುತೇಕ ಎಲ್ಲರನ್ನೂ ನೇಣಿಗೇರಿಸಲಾಯಿತು ಇಲ್ಲವೇ ಗುಂಡಿಟ್ಟು ಕೊಲ್ಲಲಾಯಿತು.

ಒಂದೇ ದಿನ ಕೆಲವೇ ಗಂಟೆಗಳ ಅವಧಿಯಲ್ಲಿ ನಡೆದ ಈ ದಂಗೆಯಲ್ಲಿ ಪ್ರಾಣ ತೆತ್ತವರು ಅಂದಾಜು 600 ಮಂದಿ. ಇವರಲ್ಲಿ ಬ್ರಿಟಿಷರು–ಭಾರತೀಯರು ಸೇರಿದ್ದರು. 350 ಬಂಡಾಯಗಾರರನ್ನು ಕೊಂದುಹಾಕಿದ್ದಾಗಿ ಮದ್ರಾಸ್ ಸೇನೆ ತನ್ನ ದಾಖಲೆಗಳಲ್ಲಿ ಬರೆದುಕೊಂಡಿತು.

ಜುಲೈ 10ರಂದು ರಾತ್ರಿ ಘಟಿಸಿದ ವಿಪ್ಲವ ಬೆಳಗಾಗುವುದರೊಳಗೆ ಮುಗಿದುಹೋಗಿತ್ತು. ಬೆಳಕು ಮೂಡುವ ಹೊತ್ತಿಗೆ ವೆಲ್ಲೂರು ಕೋಟೆಯ ಮೇಲೆ ಮೈಸೂರು ಧ್ವಜ ಹಾರಾಡುತ್ತಿತ್ತು.

ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ 1857ರಲ್ಲಿ ನಡೆದ ಸಿಪಾಯಿದಂಗೆ ಮೊದಲ ಹೋರಾಟವೆಂದು ಗುರ್ತಿಸಲಾಗಿದ್ದರೂ ಅದಕ್ಕೂ ಮೊದಲು ಕರ್ನಾಟಕದ ಕಿತ್ತೂರು ಸೇರಿದಂತೆ ಹಲವು ಪ್ರದೇಶಗಳಲ್ಲಿ ಬ್ರಿಟಿಷರಿಗೆ ಪ್ರತಿರೋಧ ಎದುರಾಗಿತ್ತು. 1857ಕ್ಕೆ ಅರ್ಧಶತಮಾನದ ಹಿಂದೆ ಸಂಭವಿಸಿದ ವೆಲ್ಲೂರು ಬಂಡಾಯವೂ ಅದರಲ್ಲೊಂದು.

ವೆಲ್ಲೂರು ದಂಗೆಯಲ್ಲಿ ಶ್ರೀರಂಗಪಟ್ಟಣ ಯುದ್ಧದಲ್ಲಿ ಸೆರೆ ಸಿಕ್ಕು ಬಂಧಿಗಳಾಗಿದ್ದವರು ಹಾಗೂ ಕೊಡಗಿನ ಕೆಲವು ಸಿಪಾಯಿಗಳೂ ಇದ್ದರೆಂದು ಬ್ರಿಟಿಷ್ ವರದಿಯಲ್ಲಿ ದಾಖಲಾಗಿದೆ. ವೆಲ್ಲೂರು ವಿಪ್ಲವದ ಬಳಿಕ ವೆಲ್ಲೂರಿನಲ್ಲಿ ವಾಸಿಸುತ್ತಿದ್ದ ಟಿಪ್ಪು ಸುಲ್ತಾನ್ ಕುಟುಂಬದ ಸದಸ್ಯರನ್ನು ಕೋಲ್ಕತ್ತಾಗೆ ಸ್ಥಳಾಂತರಿಸಲಾಯಿತೆಂದು ಮಾಹಿತಿ ಇದೆ.

ವಿಜಯನಗರ ಸಾಮ್ರಾಜ್ಯದಿಂದ ಕಟ್ಟಲಾದ ವೆಲ್ಲೂರಿನ ರಕ್ಷಣಾತ್ಮಕ ಕೋಟೆ 1806ರ ಬಂಡಾಯಕ್ಕೆ ಈಗಲೂ ಸಾಕ್ಷಿಯಾಗಿ ನಿಂತಿದೆ.

ಚಿತ್ರ ಸೌಜನ್ಯ: ವಿಕಿ ಕಾಮನ್ಸ್